



# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೨೩

**ಸ್ವಾ**ಮೀಜಿಯವರ ಜೀವನ ಚರಿತ್ರೆಯ ಮೂರನೇ ಸಂಪುಟವು ಕೊಲ್ಕತ್ತೆಯಲ್ಲಿ ಮುದ್ರಣವಾಗತೊಡಗಿತು. ಅಂಚೆಯಲ್ಲಿ ವಿರಜಾನಂದರಿಗೆ ಅದರ ಕರಡಚ್ಚು ಬರುತ್ತಿತ್ತು. ಸೀತಾರಾಮನ್‌ನ ಸಹಾಯದಿಂದ ಅದನ್ನು ಬೇಗ ತಿದ್ದಿ ಹಿಂತಿರುಗಿ ಕಳುಹಿಸುತ್ತಿದ್ದರು. ಮೂರನೇ ಸಂಪುಟದ ಪಾಂಡುಲಿಪಿಯನ್ನು ಸ್ವಾಮಿ ಶಾರದಾನಂದರು ಮತ್ತು ಸ್ವಾಮಿ ಶುದ್ಧಾನಂದರು ಆಮೂಲಾಗ್ರವಾಗಿ ಪರಿಶೀಲಿಸಿ ಸಂತೋಷಪಟ್ಟಿದ್ದರು. ಸ್ವಾಮಿ ಶುದ್ಧಾನಂದರು ಇದರ ಬಗ್ಗೆ ಕೆಲವು ಅಮೂಲ್ಯ ಸಲಹೆಗಳನ್ನಿತ್ತು ಕಾಳೀಕೃಷ್ಣರಿಗೆ ಹೀಗೆ ಪತ್ರ ಬರೆದಿದ್ದರು:

“ನಿನ್ನಂತೆ ನಿರಂತರ ಶ್ರಮವಹಿಸಿ ಇಷ್ಟು ಬೃಹದಾಕಾರದ ಜೀವನ ಚರಿತ್ರೆಯನ್ನು ಪ್ರಕಾಶಿಸಬಲ್ಲ ಮತ್ತೊಬ್ಬರನ್ನು ನಾ ಕಾಣೆ.” ತಮ್ಮ ಗುರುಭಾಯಿಗಳಿಂದ ಈ ರೀತಿಯ ಪ್ರಶಂಸಾ ಪತ್ರ ಬರಲು, ವಿರಜಾನಂದರು ತುಂಬ ಉತ್ಸಾಹಿತರಾದರು.

ವಿರಜಾನಂದರ ಜೀವನವು ಬಿಡಾರದಲ್ಲೇ ಮುಂದುವರಿಯುತ್ತಿತ್ತು. ಫೆಬ್ರವರಿ ೨೧ರಂದು ಶ್ರೀರಾಮಕೃಷ್ಣರ ಜಯಂತಿಯೂ ಬಂದಿತು. ಬಿಡಾರದಲ್ಲೇ ಜಯಂತಿಯನ್ನು ಆಚರಿಸಲಾಯಿತು. ಅಂದು ಎಲ್ಲ ಕೆಲಸಗಾರರಿಗೂ ಭೂರಿಭೋಜನ ಮಾಡಿಸಿ, ವಿರಜಾನಂದರು ನರನಾರಾಯಣರ ಸೇವೆಯನ್ನು ಪೂರೈಸಿದರು. ಆಶ್ರಮ ಕಟ್ಟಡದ ಪ್ರವೇಶ ದ್ವಾರದಲ್ಲಿ ಸ್ವಾಮೀಜಿಯವರಿಂದ ಪರಿಕಲ್ಪಿತವಾದ ಸಂಘದ ಚಿಹ್ನೆಯನ್ನು ಕೆತ್ತಿಸಬೇಕೆಂಬುದು ವಿರಜಾನಂದರ ಇಚ್ಛೆ. ಆದರೆ ಕೆತ್ತಲು ಶಿಲ್ಪಿಗಳೆಲ್ಲಿಂದ ಸಿಗುವರು? ಆದ್ದರಿಂದ ವಿರಜಾನಂದರೇ ಕಲ್ಲಿನ ಮೇಲೆ ಚಿಹ್ನೆಯನ್ನು ಬರೆದರು. ಮೇಸ್ತ್ರಿಗಳು ಅದನ್ನು ಕೆತ್ತಿಕೊಟ್ಟರು. ಆ ಕಲ್ಲನ್ನು ಬಾಗಿಲಿನ ಮೇಲ್ಗೋಡೆಯಲ್ಲಿ ಹುದುಗಿಸಲಾಯಿತು.[೧]

ಇಷ್ಟರಲ್ಲಿ ವಿರಜಾನಂದರಿಗೊಂದು ದಾರುಣ ಸುದ್ದಿ ಬಂತು, ‘ಸ್ಯಾನ್‌ಫ್ರಾನ್ಸಿಸ್ಕೋದಲ್ಲಿದ್ದ ಸ್ವಾಮಿ ತ್ರಿಗುಣಾತೀತಾನಂದರು ಒಬ್ಬ ತಲೆಗೆಟ್ಟ ಯುವಕ ಸಿಡಿಸಿದ ಬಾಂಬಿನಿಂದಾಗಿ ಆಸ್ಪತ್ರೆಯಲ್ಲಿ ೧೫ ದಿನಗಳಿದ್ದು ನಂತರ ೧೦ನೇ ಜನವರಿ (೧೯೧೫) ಸ್ವಾಮಿ ವಿವೇಕಾನಂದರ ಜಯಂತಿಯಂದು ತಮ್ಮ ದೇಹತ್ಯಾಗ ಮಾಡಿದ್ದಾರೆ’ ಎಂದು. ಬಾಂಬನ್ನು ಸಿಡಿಸಿದ ವ್ಯಕ್ತಿಯೂ ಸಹ ಸ್ಥಳದಲ್ಲೇ ಮೃತಪಟ್ಟಿದ್ದ. ಅಕಳಂಕ ಚರಿತ್ರರಾದ ಸ್ವಾಮಿ ತ್ರಿಗುಣಾತೀತರು ಮಹಾ ಕರ್ಮಯೋಗಿಗಳು! ಸ್ವಾಮೀಜಿಯವರ ಆದೇಶದ ಮೇರೆಗೆ ೧೮೯೯ರ ಜನವರಿ ತಿಂಗಳಿಂದ ಬಂಗಾಳಿ ಭಾಷೆಯಲ್ಲಿ ‘ಉದ್ಬೋಧನ’ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದ್ದರು.[೨] ನಾಲ್ಕು ವರ್ಷಗಳು ಈ ಕೆಲಸವನ್ನು ಬಹು ದಕ್ಷತೆಯಿಂದ ಮಾಡಿದ್ದರು. ಮಠದ ಆದೇಶದ ಮೇರೆಗೆ ಇವರು ೧೯೦೩ರ ಜನವರಿಯಲ್ಲಿ ಪ್ರಚಾರ ಕಾರ್ಯಕ್ಕಾಗಿ ಅಮೇರಿಕೆಗೆ ಹೋದರು. ಅಲ್ಲಿ ೧೨ ವರ್ಷಗಳ ಕಾಲ ಅವಿಶ್ರಾಂತವಾಗಿ ದುಡಿದರು. ಸ್ವದೇಶಕ್ಕೆ ಒಮ್ಮೆಯೂ ಬರಲಾಗಲಿಲ್ಲ. ಇವರ ದಣಿವರಿಯದ ಪರಿಶ್ರಮದ ಫಲವಾಗಿ ಸ್ಯಾನ್‌ಫ್ರಾನ್ಸಿಸ್ಕೋದ ವೇದಾಂತ ಕೇಂದ್ರವು ಸುಭದ್ರ ಬುನಾದಿಯನ್ನು ಪಡೆಯಿತು, ಹಾಗೂ ಇವರಿಂದಲೇ ಅಲ್ಲಿ ‘ಹಿಂದೂ ಟೆಂಪಲ್’ ಎಂಬ ಮಂದಿರವು ನಿರ್ಮಿಸಲ್ಪಟ್ಟಿತು.

೧೯೦೬ರಲ್ಲಿ ಕಾಳೀಕೃಷ್ಣರು ಅಮೇರಿಕೆಗೆ ಹೋಗುವುದಿತ್ತು. ಆದರೆ ಹಲವಾರು ಕಾರಣಗಳಿಂದ ಅದು ಕೈಗೂಡಿರಲಿಲ್ಲ. ಕಾಳೀಕೃಷ್ಣರ ಬದಲಿಗೆ ಸುಶೀಲ್ (ಸ್ವಾಮಿ ಪ್ರಕಾಶಾನಂದರು) ಹೋದರು ಹಾಗೂ ಅಲ್ಲಿ ತ್ರಿಗುಣಾತೀತರೊಂದಿಗಿದ್ದರು. ಅಲ್ಲಿಂದ ಸುಶೀಲರು ಬರೆದ ಪತ್ರಗಳಿಂದ ಸ್ವಾಮಿ ತ್ರಿಗುಣಾತೀತರ ಧರ್ಮಪ್ರಚಾರ ಮತ್ತು ಕೆಲಸಕಾರ್ಯಗಳ ಬಗ್ಗೆ ಅಲ್ಪಸ್ವಲ್ಪ ತಿಳಿದುಬರುತ್ತಿತ್ತು. ತ್ರಿಗುಣಾತೀತರು ‘ಹಿಂದೂ ಮಂದಿರ’ದ ಗ್ರಂಥಾಲಯದ ನೆಲದಲ್ಲಿ ಎಂಥ ಚಳಿಯಲ್ಲೂ ಸಹ ಕೇವಲ ಒಂದು ಕಂಬಳಿ ಹಾಸಿ ಮಲಗುತ್ತಿದ್ದರು. ಶ್ರೀರಾಮಕೃಷ್ಣರೇ ಕೇಳುತ್ತಿದ್ದಾರೆ ಎಂಬ ಭಾವನೆಯನ್ನಿಟ್ಟುಕೊಂಡು ಪ್ರವಚನಗಳನ್ನು ಕೊಡುತ್ತಿದ್ದರು. ಆದ್ದರಿಂದ ಬಹು ಎಚ್ಚರಿಕೆಯಿಂದ ಮಾತನಾಡುತ್ತಿದ್ದರು. ಯಾವುದಾದರೂ ವಿಚಾರದಲ್ಲಿ ತೀರ್ಮಾನಕ್ಕೆ ಬರಬೇಕಾದಾಗ ರಾಮಕೃಷ್ಣರ ಧ್ಯಾನ ಮಾಡುತ್ತಿದ್ದರು. ಧ್ಯಾನದ ನಂತರ ಯಾವ ವಿಚಾರ ಮನಸ್ಸಿನಲ್ಲಿ ಉದಯವಾಗುತ್ತಿತ್ತೋ ಅದು ಶ್ರೀರಾಮಕೃಷ್ಣರಿಂದ ಅನುಮೋದಿತವೆಂದೇ ಸ್ವೀಕರಿಸುತ್ತಿದ್ದರು. ಮಂದಿರದ ಎದುರು ಒಂದು ‘ಎವರ್-ಗ್ರೀನ್-ಕ್ರೀಪರ್’ರನ್ನು (ಸದಾ ಹಚ್ಚ ಹಸಿರಿನ ಲತೆ) ಬೆಳೆಸಿದ್ದರು. ‘ಕಠೋರ ಸಾಧನೆಯ ನಡುವೆ ಸ್ವಲ್ಪ ಹಸಿರು ಛಾಯೆ

---

೧ ೧೯೪೫ರಲ್ಲಿ ಶ್ಯಾಮಲಾತಾಲ್‌ನ ಆಶ್ರಮದ ಮುಖ್ಯ ಕಟ್ಟಡದ ದುರಸ್ತಿ ಹಾಗೂ ಬದಲಾವಣೆಗಳನ್ನು ಮಾಡುವಾಗ ಮೇಲೆ ಹೇಳಿದ, ಲಾಂಛನವಿದ್ದ ಕಲ್ಲನ್ನು ಮೊದಲನೇ ಅಂತಸ್ತಿನ ಗೋಡೆಯ ಮಧ್ಯದಲ್ಲಿ ಇರಿಸಲಾಯಿತು.

೨ ಒಂಬತ್ತು ವರ್ಷಗಳ ಕಾಲ ‘ಉದ್ಬೋಧನ’ ಪತ್ರಿಕೆಯು ಪಾಕ್ಷಿಕವಾಗಿ (೧೫ ದಿನಗಳಿಗೆ ಒಮ್ಮೆ) ಪ್ರಕಟವಾಗುತ್ತಿತ್ತು . ಅನಂತರ ಅದು ಮಾಸಪತ್ರಿಕೆಯಾಯಿತು.

ಇರುವುದು ಒಳ್ಳೆಯದು' ಎನ್ನುತ್ತಿದ್ದರು. ಒಮ್ಮೆ ತಾನು ವಿವಾಹವಾಗುವುದಾಗಿ ಸುದ್ದಿ ಹಬ್ಬಿಸಿದರು. ಕುತೂಹಲದಿಂದ ಅನೇಕರು ಬಂದು ನೆರೆದರು. ತ್ರಿಗುಣಾತೀತರು ಶ್ರೀರಾಮಕೃಷ್ಣರ ಪಟಕ್ಕೆ ಮಾಲೆ ಹಾಕಿ ತಮ್ಮ ವಿವಾಹವನ್ನು ಮುಗಿಸಿಕೊಂಡರು!

ತ್ರಿಗುಣಾತೀತರು ವೀರಯೋಧನೊಬ್ಬ ರಣರಂಗದಲ್ಲಿ ಮೃತ್ಯುವನ್ನು ವರಿಸುವಂತಹ ಮಹಾನ್ ಆದರ್ಶವನ್ನು ತೋರಿ ಹೋದರು. ಅವರ ಮೃತ್ಯುವಿನಿಂದಾಗಿ ರಾಮಕೃಷ್ಣ ಒಕ್ಕೂಟದಲ್ಲಿ ಭರಿಸಲಾಗದ ಶೂನ್ಯತೆಯುಂಟಾಯಿತು. ಅದೆಂತಹ ಉದಾರ ಹೃದಯದ ಅಮಾಯಕ ಸ್ವಭಾವ ಅವರದು! ಅವರಿಂದ ಪಡೆದ ಪ್ರೀತಿ-ವಾತ್ಸಲ್ಯಗಳು ವಿರಜಾನಂದರ ಸ್ಮೃತಿಪಟಲದಲ್ಲಿ ತೇಲಿ ಬಂದವು. ವರಾಹನಗರ, ಆಲಂಬಜಾರಿನಲ್ಲಿ ಮಠವಿದ್ದಾಗಿನ ನೆನಪುಗಳು:

''ಒಮ್ಮೆ ಶ್ರೀಮಾತೆಯವರನ್ನು ಬಿಟ್ಟು ಬರಲು ಶಾರದಾ ಮಹಾರಾಜರೊಂದಿಗೆ (ಸ್ವಾಮಿ ತ್ರಿಗುಣಾತೀತಾನಂದರು) ಜಯರಾಂಬಾಟಿಗೆ ಹೋಗಿದ್ದೆ. ಆ ಬಾರಿ ಶ್ರೀಮಾತೆಯವರ ಜೊತೆಗೆ ಸ್ತ್ರೀ ಭಕ್ತರಾರೂ ಇರಲಿಲ್ಲ. ವರ್ಧಮಾನದಿಂದ ನಾನು, ಶಾರದಾ ಮಹಾರಾಜರು ಎತ್ತಿನ ಗಾಡಿಯಲ್ಲೂ ಮಾತೆಯವರು ಪಲ್ಲಕ್ಕಿಯಲ್ಲೂ ಪ್ರಯಾಣಿಸಿದ್ದೆವು. ಆದರೆ ನಮ್ಮ ಎತ್ತಿನ ಗಾಡಿಯು ತಲುಪುವುದು ತಡವಾಗಿ, ಶ್ರೀಮಾತೆಯವರು ತಲುಪುವ ಮುನ್ನ ನಾವೆಲ್ಲಿ ಛತ್ರಕ್ಕೆ ತಲುಪಲಾಗುವುದಿಲ್ಲವೋ ಎಂಬ ಆತಂಕದಿಂದ ಗಾಡಿಯಿಂದಿಳಿದು ಸ್ವಲ್ಪ ದೂರ ನಡೆದು, ಸ್ವಲ್ಪ ದೂರ ಓಡಿ ಅವರಿಗಿಂತ ಮೊದಲೇ ತಲುಪಲು ಪ್ರಯತ್ನಿಸುತ್ತಿದ್ದೆವು. ಇಲ್ಲವೇ ದಾಪುಗಾಲು ಹಾಕುತ್ತ ಪಲ್ಲಕ್ಕಿಯೊಡನೆಯೇ ನಡೆಯುತ್ತಿದ್ದೆವು. ಶ್ರೀಮಾತೆಯವರು ಎಷ್ಟು ಬೇಡವೆಂದರೂ ಕೇಳುತ್ತಿರಲಿಲ್ಲ; ನಮಗೇನೂ ಕಷ್ಟವಾಗುತ್ತಿಲ್ಲ ಎಂದು ಹೇಳುತ್ತಿದ್ದೆವು. ಛತ್ರವನ್ನು ತಲುಪಿದ ಕೂಡಲೇ ನಾವು ಮೊದಲು ಅವರ ಹಾಸಿಗೆಯನ್ನು ಪಲ್ಲಕ್ಕಿಯಿಂದ ತಂದು ಕೊಠಡಿಯಲ್ಲಿ ಹಾಸುತ್ತಿದ್ದೆವು. ಅವರು ಕೈ-ಕಾಲು ತೊಳೆದು ರಾಮಕೃಷ್ಣರ ಪಟ ಮತ್ತು ಪೂಜಾಸಾಮಗ್ರಿಗಳನ್ನು ಹೊರತೆಗೆದು ಒಂದು ಕಡೆ ಸ್ಥಾಪಿಸುತ್ತಿದ್ದರು. ಸ್ವಲ್ಪ ಹೊತ್ತು ವಿಶ್ರಮಿಸಿ, ಸ್ನಾನ ಮಾಡಿ ಪೂಜೆಗೆ ಕುಳಿತುಕೊಳ್ಳುತ್ತಿದ್ದರು. ಅಷ್ಟರಲ್ಲಿ ಶಾರದಾ ಮಹಾರಾಜರು ಅಕ್ಕಿ-ಬೇಳೆ ಮುಂತಾದವುಗಳನ್ನು ಸಂಗ್ರಹಿಸಿ ನೈವೇದ್ಯಕ್ಕಾಗಿ ಅಡಿಗೆಯನ್ನು ಮಡಕೆಯಲ್ಲಿ ಸಿದ್ಧಪಡಿಸುತ್ತಿದ್ದರು. ನಾನವರಿಗೆ ಎಲ್ಲವನ್ನೂ ಹೊಂದಿಸಿ ಕೊಡುತ್ತಿದ್ದೆ. ಶ್ರೀಮಾತೆಯವರ ಪೂಜೆಯಾಗುತ್ತಿದ್ದಂತೆ, ಶಾರದಾ ಮಹಾರಾಜರು ನೈವೇದ್ಯವನ್ನು ತಟ್ಟೆಯಲ್ಲಿ ಜೋಡಿಸಿಟ್ಟು ಕೊಡುತ್ತಿದ್ದರು, ನಾನು ಅದನ್ನು ತೆಗೆದುಕೊಂಡು ಹೋಗಿ ದೇವರ ಮುಂದಿಡುತ್ತಿದ್ದೆ. ಆದರೆ ನಾನೊಬ್ಬ ಕಾಯಸ್ಥ ಹಾಗೂ ಇನ್ನೂ ಬ್ರಹ್ಮಚಾರಿ (ಆಗಿನ್ನೂ ಬ್ರಹ್ಮಚರ್ಯ ದೀಕ್ಷೆಯ ಅನುಷ್ಠಾನ ಪ್ರಚಲಿತವಿರಲಿಲ್ಲ). ಹೇಗೆ ತಾನೇ ಶ್ರೀರಾಮಕೃಷ್ಣರ ನೈವೇದ್ಯದ ಅನ್ನವನ್ನು ಮುಟ್ಟಲಿ? ಎಂದು ಮೊದಲು ಹಿಂಜರಿದೆ. ಶಾರದಾ ಮಹಾರಾಜರದೂ ಕಾಯಸ್ಥ ಶರೀರವೇ ಆದರೂ ಅವರೊಬ್ಬ ಸಂನ್ಯಾಸಿಗಳು ಹಾಗೂ ಶ್ರೀರಾಮಕೃಷ್ಣರ ಜೊತೆಗಿದ್ದವರು. ಶ್ರೀಮಾತೆಯವರನ್ನು ಕೇಳಲಾಗಿ ಅವರು, ''ತೆಗೆದುಕೊಂಡು ಬಾ, ಅದರಿಂದ ದೋಷವೇನೂ ಇಲ್ಲ'' ಎಂದರು. ನಾನು ಅವರ ಅಭಯವಾಣಿಯಿಂದ ಸಮಾಧಾನಗೊಂಡೆ. ಆ ಬಾರಿ ಶ್ರೀಮಾತೆಯವರೊಂದಿಗೆ ಬೇರಾರೂ ಇಲ್ಲದ್ದರಿಂದ ಅವರ ನಿಕಟ ಸಂಪರ್ಕವನ್ನು ಹೊಂದುವ ಮತ್ತು ಅವರ ಸೇವೆಯನ್ನು ಮಾಡುವ ಸೌಭಾಗ್ಯ ನನ್ನದಾಗಿತ್ತು. ಇದರಿಂದ ಬಹಳ ಆನಂದಪಟ್ಟೆ. ಅವರ ದಿಂಬಿನ ಚೀಲವೊಂದು ಕೊಳೆಯಾಗಿ ಹರಿದುಹೋದದ್ದರಿಂದ ಶ್ರೀಮಾತೆಯವರು ಅದನ್ನು ಎಸೆದು ಬೇರೊಂದನ್ನು ಹಾಕಲು ಹೇಳಿದರು. ಆದರೆ ಶ್ರೀಮಾತೆಯವರು ಉಪಯೋಗಿಸಿದ್ದರೆಂದು ಅದನ್ನು ಎಸೆಯದೆ ಭದ್ರವಾಗಿ ಎತ್ತಿಟ್ಟುಕೊಂಡೆ. ಜಯರಾಂಬಾಟಿಯಲ್ಲಿದ್ದಾಗ ಶಾರದಾ ಮಹಾರಾಜರು ಮತ್ತು ನಾನು ಬಹು ದೂರದೂರಕ್ಕೆ ಹೋಗಿ ಶ್ರೀಮಾತೆಯವರ ಪೂಜೆಗೆ ಬೇಕಾದ ಹೂಗಳನ್ನು ಸಂಗ್ರಹಿಸಿ ತರುತ್ತಿದ್ದೆವು. ಅಲ್ಲಿ ಪೂಜೆಯ ಹೂವಿನ ಅಭಾವವನ್ನು ಕಂಡು ಶಾರದಾ ಮಹಾರಾಜರು ವಿವಿಧ ಜಾತಿಯ ಹೂವಿನ ಗಿಡಗಳನ್ನು ನೆಟ್ಟಿದ್ದರು. ಇದರಿಂದಾಗಿ ಮುಂದೆ ಪೂಜೆಗೆ ಹೂವು ಸಿಗುವಂತಾಯಿತು. ಆದರೆ ಅನಂತರದಲ್ಲಿ ಅವುಗಳನ್ನು ಸರಿಯಾಗಿ ನೋಡಿಕೊಳ್ಳುವವರಿಲ್ಲದೆ ಒಣಗಿ ಹೋದವು.''

* * *

೧೯೧೪ನೇ ವರ್ಷದ ನವೆಂಬರ್ ೧೦ರಂದು ಶ್ಯಾಮಲಾ ತಾಲ್ ಆಶ್ರಮದ ಕಟ್ಟಡ ನಿರ್ಮಾಣಕಾರ್ಯ ಪ್ರಾರಂಭವಾಗಿತ್ತು. ೧೯೧೫ರ ಮೇ ೨೧ರ ಶುಭದಿನದಂದು ಅದರ ಗೃಹಪ್ರವೇಶವಿತ್ತು. ಆರು ತಿಂಗಳು ಡೇರೆಯಲ್ಲಿ ಒಂದೇ ಸಮನೆ ಕೂಲಿ ಮೇಸ್ತ್ರಿಗಳೊಂದಿಗೆ ಕಠಿಣ ದುಡಿತ, ತನ್ನ ಜಪ-ಧ್ಯಾನ, ಕೆಲಸಗಾರರ ಲೆಕ್ಕ-ಪತ್ರ ಇಡುವುದು ಹಾಗೂ ಇವುಗಳೊಂದಿಗೆ ಸ್ವಾಮೀಜಿಯವರ ಜೀವನ ಚರಿತ್ರೆಯನ್ನು ಬರೆಯುವ ಕೆಲಸ — ನಿಜಕ್ಕೂ ವಿರಜಾನಂದರ ಮೇಲೆ ಬಿರುಗಾಳಿಯೇ ಬೀಸಿ ಹೋಗಿತ್ತು.

ಗೃಹಪ್ರವೇಶದ ದಿನ ಬೆಳಗ್ಗೆಯೇ ಮದರ್ ಸೇವಿಯರ್ ಮಾಯಾವತಿಯಿಂದ ಬಂದಿದ್ದರು. ಹೊಸ ಕಟ್ಟಡದ ಕೆಳ ಅಂತಸ್ತಿನಲ್ಲಿ ರಾತ್ರಿ ೧೦ರಿಂದ ೧೨ರವರೆಗೆ ಹೋಮ ನಡೆಯಿತು. ಸೀತಾರಾಮನ್ ಪೂಜಾರಿ ಹಾಗೂ ವಿರಜಾನಂದರೇ ತಂತ್ರಧಾರಕರು. ವಿಧಿವತ್ತಾಗಿ ಉದ್ಘಾಟನೆಯು ಮುಗಿದ ಮೇಲೆ ಆಶ್ರಮಕ್ಕೆ '**ವಿವೇಕಾನಂದ ಆಶ್ರಮ**' ಎಂದು ಮದರ್ ಸೇವಿಯರ್ ನಾಮಕರಣ ಮಾಡಿದರು. ರಾತ್ರಿ ೧ ಗಂಟೆಗೆ ಎಲ್ಲರೂ ಪ್ರಸಾದ ಸ್ವೀಕರಿಸಿ, ಆಶ್ರಮದ ಕೋಣೆಗಳಲ್ಲಿ ಮಲಗಲು ಹೋದರು.

ಮಠಾಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರು ಆಶ್ರಮದ ಉದ್ಘಾಟನೆಯ ವಿಷಯವನ್ನು ತಿಳಿದು, ತಮ್ಮ ಶುಭಹಾರೈಕೆಗಳನ್ನು ತಿಳಿಸುತ್ತ ಹೀಗೆಂದು ಪತ್ರ ಬರೆದಿದ್ದರು:

ಭದ್ರಕ್

೯.೬.೧೯೧೫

"..... ಹೊಸ ಆಶ್ರಮದ ಉದ್ಘಾಟನೆಯಾಗಿದೆ. ಹಾಗೂ ಅದಕ್ಕೆ ನಮ್ಮ ಸ್ವಾಮೀಜಿಯವರ ಹೆಸರನ್ನಿಡಲಾಗಿದೆ ಎಂದು ತಿಳಿದು ತುಂಬ ಸಂತೋಷವಾಯಿತು. ಮದರ್ ಸೇವಿಯರ್ ಅದರ ಪರಿಸರವನ್ನು ಮೆಚ್ಚಿದ್ದಾರೆಂದು ಕೇಳಿ ಇನ್ನೂ ಹೆಚ್ಚಿನ ಸಂತೋಷವಾಯಿತು. ಈ ಆಶ್ರಮದ ಆದರ್ಶದ ಸಾಫಲ್ಯಕ್ಕೆ ನನ್ನ ಪೂರ್ಣ ಬೆಂಬಲ ಹಾಗೂ ಶುಭಾಕಾಂಕ್ಷೆಗಳಿವೆ ಎಂಬುದನ್ನು ತಿಳಿ. ಆಶ್ರಮವನ್ನೊಮ್ಮೆ ನೋಡಬೇಕೆಂಬ ಇಚ್ಛೆ ಇದೆ. ಸ್ಟೇಷನ್ನಿನಿಂದ ೩೦ ಮೈಲಿಯೊಳಗೆ ಇದೆಯಾದ್ದರಿಂದ ಹೋಗಿ ಬರಲು ತೊಂದರೆಯೇನೂ ಆಗದು ಎಂದೆನಿಸುತ್ತದೆ...."

ಸ್ವಾಮಿ ಬ್ರಹ್ಮಾನಂದ

ಪೂಜ್ಯ ಸ್ವಾಮಿ ತುರೀಯಾನಂದರು ಆಶ್ರಮ ನಿರ್ಮಾಣದ ಸಮಯದಲ್ಲೇ ಅವರ ಆಶೀರ್ವಾದಗಳನ್ನು ತಿಳಿಸಿ ಪತ್ರವನ್ನು ಬರೆದಿದ್ದರು (ಹೃಷೀಕೇಶ ೨೧.೧.೧೯೧೪):

"ಇಷ್ಟು ವರ್ಷ ಕಠಿಣವಾದ ಕೆಲಸಗಳಲ್ಲಿ ನಿರತವಾಗಿದ್ದು ಈಗ ಅವುಗಳಿಂದ ನಿವೃತ್ತನಾಗಿ ವಿಶ್ರಾಂತಿಯಲ್ಲಿರುವೆ ಎಂದು ಕೇಳಿ ತುಂಬ ಸಂತೋಷವಾಯಿತು. ಈ ಹಿಂದೆಯೂ ನೀನು ಅನೇಕ ಬಾರಿ ಆಧ್ಯಾತ್ಮಿಕ ಅನುಭವಗಳನ್ನು ಪಡೆಯಲೆಂದು ಸಾಧನೆಯಲ್ಲಿ ತೊಡಗಿದ್ದೆ. ಆದರೆ ಒಂದಲ್ಲ ಒಂದು ಕಾರಣದಿಂದ ವಿಘ್ನಗಳುಂಟಾಗಿದ್ದವು. ಹೋಗಲಿ, ಈ ಬಾರಿ ನೀನು ಮತ್ತೆ ಆ ಉದ್ದೇಶಕ್ಕಾಗಿ ನಿನ್ನನ್ನು ನೀನು ತೊಡಗಿಸಿಕೊಳ್ಳಲು ಕಾತರನಾಗಿರುವೆ ಎಂಬುದನ್ನು ಕೇಳಿ ಸಮಾಧಾನಗೊಂಡೆ. ಈ ಬಾರಿ ಅನುಕೂಲಕರ ಸಂದರ್ಭಗಳು ಒದಗಿ ಬಂದಿವೆ ಎಂಬುದನ್ನು ಮನಗಂಡೆ. ಏಕೆಂದರೆ ಅನುಕೂಲಕರ ಸ್ಥಳ ಮತ್ತು ನಿನ್ನ ಸಂಕಲ್ಪ ಸಿದ್ಧಿಗಾಗಿ ತಾಯಿ ಹೃದಯದ ಮಿಸೆಸ್ ಸೇವಿಯರ್‌ನ ಮಮತೆ ಹಾಗೂ ನೆರವೂ ಸಿಕ್ಕಿದೆ. ಮದರ್ ಒಂದು ವರ್ಷದ ನಂತರ ಇಂಗ್ಲೆಂಡ್‌ಗೆ ಹೋಗುವವರಿದ್ದಾರೆಂಬ ಸುದ್ದಿ ಕೇಳಿ ಮನಸ್ಸಿಗೆ ಕ್ಲೇಶವಾಯಿತು. ನಾವು ಅವರ ಯೋಗ್ಯ ಸಂತಾನವಲ್ಲದಿದ್ದರೂ ಸಹ ಮೊದಲಿನಂತೆ ನಮ್ಮೊಂದಿಗಿರಲು ಅವರು ಹಿಂತಿರುಗಿ ಬರುವರೆಂದೇ ಎಣಿಸುವೆ. ಅವರಿಗೆ ನನ್ನ ಸಾದರ ಗೌರವ ಹಾಗೂ ಅಭಿನಂದನೆಗಳನ್ನು ತಿಳಿಸು. ಸದ್ಯದಲ್ಲೇ ಪ್ರಾರಂಭವಾಗುವ ನಿನ್ನ ಆಶ್ರಮದಲ್ಲಿ ಕೆಲವು ದಿನಗಳ ಕಾಲ ತಂಗುವಂತೆ ನನ್ನನ್ನು ಆಮಂತ್ರಿಸಿರುವುದು ಸಂತೋಷದ ವಿಷಯ. ಜಗದಂಬೆಯು ನಿನ್ನ ಮಹದುದ್ದೇಶವನ್ನು ಸಫಲಗೊಳಿಸಲಿ....

ತುರೀಯಾನಂದ

ಹೊಸ ಆಶ್ರಮದಲ್ಲಿ ಆನಂದದಿಂದ ದಿನಗಳು ಕಳೆಯತೊಡಗಿದವು. ಮದರ್ ಸೇವಿಯರ್ ಅಲ್ಲಿಯೇ ಇದ್ದಾರೆ. ಕೆಲ ತಿಂಗಳುಗಳ ನಂತರ ಇಂಗ್ಲೆಂಡಿಗೆ ಹೋಗಲಿದ್ದಾರೆ. ಕಾನೂನು ರೀತ್ಯಾ ಈಗಲೂ ಸಹ ವಿರಜಾನಂದರೇ ಮಾಯಾವತಿಯ ಮುದ್ರಣಾಲಯದ ವ್ಯವಸ್ಥಾಪಕರು. ವಿರಜಾನಂದರು ಈಗ ಬೇಲೂರು ಮಠಕ್ಕೆ ಪತ್ರ ಬರೆದು, ಮಾಯಾವತಿಯ ಈಗಿನ ಅಧ್ಯಕ್ಷರಾಗಿರುವ ಪ್ರಜ್ಞಾನಂದರನ್ನು ಅದ್ವೈತ ಆಶ್ರಮದ ಟ್ರಸ್ಟಿಯನ್ನಾಗಿ ಮಾಡಿ, ಅವರನ್ನೇ ಮುದ್ರಣಾಲಯದ ವ್ಯವಸ್ಥಾಪಕರನ್ನಾಗಿ ನೇಮಿಸಬೇಕೆಂದು ಸ್ವಾಮಿ ಬ್ರಹ್ಮಾನಂದರನ್ನು ವಿನಂತಿಸಿಕೊಂಡರು. ಅದಕ್ಕವರು ಒಪ್ಪಿ ತಕ್ಷಣವೇ ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಿದರು. ಹೀಗೆ ವಿರಜಾನಂದರು ಮುದ್ರಣಾಲಯದ ಜವಾಬ್ದಾರಿಯಿಂದ ಮುಕ್ತರಾದರು.

ಸ್ವಾಮೀಜಿಯವರ ಜೀವನಚರಿತ್ರೆಯ ಮೂರನೇ ಖಂಡವು ಮುದ್ರಿತವಾಗಿತ್ತು. ಈಗ ನಾಲ್ಕನೆಯದನ್ನು ವಿರಜಾನಂದರು ಪ್ರಾರಂಭಿಸಿದರು. ಇಷ್ಟರಲ್ಲಿ ಆಲ್ಮೋರದಿಂದ ಫ್ರ್ಯಾಂಕ್ ಅಲೆಕ್ಸಾಂಡರ್‌ನ ಪತ್ರವೊಂದು ಬಂದಿತು. ಅದರಲ್ಲಿ ಅವರು ಮಾಯಾವತಿಯಲ್ಲಿ ತಾವಿದ್ದಾಗ ನಡೆದ ಅಹಿತಕರ ವೈಮನಸ್ಯಕ್ಕಾಗಿ ಅಂತರ್ಯದಲ್ಲೇ ಕ್ಷಮೆ ಯಾಚಿಸಿದ್ದರು. ವಿರಜಾನಂದರು ಅವರಿಗೆ ತಮ್ಮ ಪ್ರೀತಿ ಹಾಗೂ ಶುಭಹಾರೈಕೆಗಳು ಯಾವಾಗಲೂ ಇವೆ ಎಂದು ತಿಳಿಸಿ ಹಿಂದಿರುಗಿ ಪತ್ರ ಬರೆದರು. ಇದಾದ ಕೆಲವು ತಿಂಗಳಲ್ಲಿ ಅಲೆಕ್ಸಾಂಡರ್ ೨೬ನೇ ಸೆಪ್ಟೆಂಬರ್ ೧೯೧೫ರಲ್ಲಿ ಮಾಯಾವತಿಗೆ ಹೋಗುವ ಮೊದಲು ಶ್ಯಾಮಲಾತಾಲ್‌ಗೆ ಬಂದಿಳಿದರು! ಶೀಘ್ರವೇ ಅವರು ಅಮೇರಿಕೆಗೆ ಹೋಗುವವರಿದ್ದರು. ಆದ್ದರಿಂದ ಮಾಯಾವತಿಗೆ ಕೊನೆಯದಾಗಿ ಭೇಟಿ ಇತ್ತರು. ಫ್ರ್ಯಾಂಕ್ ಶ್ಯಾಮಲಾತಾಲ್‌ನಲ್ಲಿ ಇದ್ದಷ್ಟು ದಿನ ಮದರ್ ಸೇವಿಯರ್ ಹಾಗೂ ವಿರಜಾನಂದರು ಅವರನ್ನು ಆದರದಿಂದ ನೋಡಿಕೊಂಡರು. ಮಾಯಾವತಿಗೆ ಹೋಗಿ, ಅಲ್ಲಿ ಕೆಲವು ವಾರಗಳಿದ್ದು ಹಿಂತಿರುಗುವಾಗಲೂ ಸಹ ಫ್ರ್ಯಾಂಕ್ ಶ್ಯಾಮಲಾತಾಲ್‌ಗೆ ಭೇಟಿ ಇತ್ತು, ಕೆಲವು ದಿನ ತಂಗಿದ್ದರು.[೩]

ವಿರಜಾನಂದರು ಕೆಲವೊಮ್ಮೆ ಮದರ್ ಅವರನ್ನು ಬೆಟ್ಟದ ತಪ್ಪಲಲ್ಲಿದ್ದ ಗ್ರಾಮಗಳಿಗೆ ಕರೆದೊಯ್ಯುತ್ತಿದ್ದರು. ಅಲ್ಲಿಯ ಬಡ ಪಹಾಡಿಗಳ ಸರಳತೆಯನ್ನು ಕಂಡು ಮದರ್ ಹಿಗ್ಗುತ್ತಿದ್ದರು. ಅವರ ಮಕ್ಕಳಿಗೆ ಕಾಸನ್ನು ಹಂಚುತ್ತಿದ್ದರು. ಶ್ಯಾಮಲಾತಾಲ್ ಆಶ್ರಮದ ಪರ್ವತದ ಶಿಖರವು ಆಶ್ರಮದಿಂದ ೫೦೦ ಅಡಿಗಳಷ್ಟು ಎತ್ತರದಲ್ಲಿತ್ತು. ಇದಲ್ಲದೆ, ಹತ್ತಿರದಲ್ಲೇ ಹಲವಾರು ಪರ್ವತ ಶಿಖರಗಳಿದ್ದವು. ಕೆಲವೊಮ್ಮೆ ಈ ಶಿಖರಗಳಿಗೆ ಹತ್ತಿ ಬಹುದೂರಕ್ಕೂ ಹರಡಿದ್ದ ಪರ್ವತಮಾಲೆಯನ್ನು ಮೂಕವಿಸ್ಮಿತರಾಗಿ ನೋಡುತ್ತಿದ್ದರು. ನಿರ್ಜನವಾದ ಬಹುಯೋಜನ ವಿಸ್ತೃತ-ನಿಬಿಡ ಅರಣ್ಯದ ಗಾಂಭೀರ್ಯವನ್ನು ಅವರು ಸವಿಯುತ್ತಿದ್ದರು.

---

೩. ಇದಾದ ಸುಮಾರು ಒಂದು ವರ್ಷ ಎಂಟು ತಿಂಗಳ ನಂತರ, ೧೯೧೭ರ ಜುಲೈ ೧೧ರಂದು ಅಮೆರಿಕದ ಡೆಟ್ರಾಯಿಟ್ ನಗರದಲ್ಲಿ ಫ್ರ್ಯಾಂಕ್‌ನ ದೇಹತ್ಯಾಗವಾಯಿತು. ಆತನ ಅಂತಿಮ ಕಾಲದಲ್ಲಿ ಸಿಸ್ಟರ್ ಕ್ರಿಸ್ಟೀನ್ ಅವರ ಬಳಿ ಇದ್ದರು. "ಸ್ವಾಮೀಜಿ ನನ್ನನ್ನು ಕರೆಯುತ್ತಿದ್ದಾರೆ. ನಾನೂ ಕೂಡ ಅವರ ಬಳಿಗೆ ಹೋಗಲು ಕಾತರನಾಗಿರುವೆ' ಎಂದು ಫ್ರ್ಯಾಂಕ್ ಕ್ರಿಸ್ಟೀನ್‌ಗೆ ಹೇಳಿದ್ದ.

ವಿರಜಾನಂದರೊಂದಿಗಿದ್ದ ಬ್ರಹ್ಮಚಾರಿ ಸೀತಾರಾಮನ್ ಒಂದು ದಿನ ಇದ್ದಕ್ಕಿದ್ದಂತೆ ಅವರಿಗೆ ಹೀಗೆಂದು ತಿಳಿಸಿದರು: ‘‘ಮಾಯಾವತಿ ಹಾಗೂ ಶ್ಯಾಮಲಾತಾಲ್‌ನಲ್ಲಿ ವಿರಜಾನಂದರೊಂದಿಗೆ ತಾವು ಯಾವುದೇ ಘರ್ಷಣೆಯಿಲ್ಲದೆ ಶಾಂತಿಯಿಂದಿದ್ದರೂ, ವಿರಜಾನಂದರನ್ನು ಕಂಡರೆ ತಮಗೆ ಭಕ್ತಿ-ಶ್ರದ್ಧೆಗಳಿದ್ದರೂ ಕೂಡ ತನ್ನ ಸ್ವಭಾವವು ವಿರಜಾನಂದರ ಸ್ವಭಾವಕ್ಕಿಂತ ಎಷ್ಟು ಬೇರೆಯೆಂದರೆ, ಸದಾಕಾಲ ಅವರೊಂದಿಗಿರಲು ಮನಸ್ಸೊಪ್ಪುತ್ತಿಲ್ಲ’’ ಎಂದು. ಎಷ್ಟು ವಿಚಿತ್ರ ಮಾನವನ ಮನಸ್ಸು! ಕಾಳೀಕೃಷ್ಣ ಮಹಾರಾಜರು ಸೀತಾರಾಮನ್ ಹೇಳಿದ್ದನ್ನು ಕೇಳಿ ಸ್ವಲ್ಪ ಚಕಿತರಾದರು. ಆದರೆ ಯಾರನ್ನೂ ಬಲವಂತವಾಗಿ ಇರಿಸಿಕೊಳ್ಳುವ ಸ್ವಭಾವ ಅವರದ್ದಲ್ಲವಾದ್ದರಿಂದ ಪ್ರಸನ್ನಚಿತ್ತರಾಗಿಯೇ ಅವರನ್ನು ಕಳುಹಿಸಿಕೊಟ್ಟರು.[೪]

ಆಶ್ರಮವು ಸ್ಥಾಪಿತವಾದ ಕೆಲವು ದಿನಗಳಲ್ಲೇ ಅಲ್ಲಿಯ ಗುಡ್ಡಗಾಡಿನ ಜನರು ಅನಾರೋಗ್ಯದಿಂದ ಪೀಡಿತರಾದಾಗ ಔಷಧಿಗಾಗಿ ವಿರಜಾನಂದರಲ್ಲಿಗೆ ಓಡಿಬರುತ್ತಿದ್ದರು. ಔಷಧಿಗಳ ಬಗ್ಗೆ ತನಗೇನೂ ತಿಳಿದಿಲ್ಲವೆಂದರೂ ಕೇಳುತ್ತಿರಲಿಲ್ಲ , ಪೀಡಿಸುತ್ತಿದ್ದರು. ಬೇರೆ ದಾರಿಗಾಣದೆ ವಿರಜಾನಂದರು ತಮ್ಮ ಬಳಿ ಕೆಲವು ನಾಟಿ ಔಷಧಗಳನ್ನು ಇಟ್ಟುಕೊಳ್ಳುತ್ತಿದ್ದರು. ‘ಕಂಬ್ಳಿ ನಹಿ ಛೋಡ್ತಿ!’ ಈ ಕೆಲಸವೇ ಬೆಳೆದು ಔಷಧಾಲಯ ಹಾಗೂ ಆಸ್ಪತ್ರೆಗಳಾಗಿ ರೂಪುಗೊಂಡವು.

ಇಷ್ಟರಲ್ಲಿ ೧೪ ವರ್ಷಗಳ ನಂತರ ಮತ್ತೆ ಮಿಸ್ ಮ್ಯಾಕ್ಲಿಯಾಡ್ ಭಾರತಕ್ಕೆ ಬಂದರು.[೫] ಮದರ್ ಪತ್ರದಿಂದ ಶ್ಯಾಮಲಾತಾಲಿನ ಹೊಸ ಆಶ್ರಮದ ಬಗ್ಗೆ ತಿಳಿದು ೮-೧೦ ದಿನಗಳ ಮಟ್ಟಿಗೆ ಬಂದು ಇಳಿದುಕೊಂಡಿದ್ದರು. ಆಶ್ರಮವನ್ನು ಬಹುವಾಗಿ ಪ್ರಶಂಸಿಸಿದರು. ಮದರ್ ಸೇವಿಯರ್ ತಮ್ಮ ಕೊಠಡಿಯನ್ನೇ ಮ್ಯಾಕ್ಲಿಯಾಡ್‌ಗೆ ಬಿಟ್ಟುಕೊಟ್ಟಿದ್ದರು. ಇದನ್ನು ಮುಂದೊಮ್ಮೆ ನೆನಪಿಸಿಕೊಳ್ಳುತ್ತ ವಿರಜಾನಂದರು, ‘‘ವಿದೇಶಿಯರದು ಅದೆಂತಹ ಸೌಜನ್ಯ! ಮಿಸ್ ಮ್ಯಾಕ್ಲಿಯಾಡ್ ಅತಿಥಿಯೆಂದು ಹೇಳಿ, ಮದರ್ ತಮಗೆ ಎಷ್ಟೇ ಅನಾನುಕೂಲವಾದರೂ ಕೂಡ ತಮ್ಮ ಕೋಣೆಯನ್ನು ಅವರಿಗೆ maximum comfort ನೀಡಲು ಬಿಟ್ಟುಕೊಟ್ಟಿದ್ದರು’’ ಎಂದಿದ್ದರು. ಮಿಸ್ ಮ್ಯಾಕ್‌ಲಾಡ್ ಅಲ್ಲಿರುವಷ್ಟು ದಿನವೂ ಸ್ವಾಮೀಜಿಯವರ ಬಗ್ಗೆ ಮಾತುಕತೆಗಳನ್ನಾಡುತ್ತ ಬಹಳ ಆನಂದದಿಂದ ದಿನಗಳನ್ನು ಕಳೆದರು.

ಶ್ಯಾಮಲಾತಾಲ್‌ನಿಂದ ೧೨ ಮೈಲಿ ದೂರದಲ್ಲಿ ಶಾರದಾ (ಕಾಳೀ) ನದಿಯ ತೀರದಲ್ಲಿ ‘ಪುಣ್ಯಗಿರಿ’ ಎಂಬ ಪರ್ವತವಿದೆ. ಇದು ಪ್ರಸಿದ್ಧವಾದ ದೇವೀತೀರ್ಥ. ಮಿಸೆಸ್ ಸೇವಿಯರ್ ಅಲ್ಲಿಗೆ ಹೋಗಲು ಬಹಳ ಇಚ್ಛೆಪಟ್ಟಿದ್ದರಿಂದ ವಿರಜಾನಂದರು ಅವರನ್ನು ಕರೆದುಕೊಂಡು ಆ ತೀರ್ಥದರ್ಶನಕ್ಕೆ ಹೊರಟರು. ಅಲ್ಲಿಗೆ ದಟ್ಟವಾದ ಕಾಡಿನ ಮೂಲಕ ಪಯಣಿಸಬೇಕು. ಪರ್ವತದ ಶಿಖರವು ಕಡಿದಾಗಿದ್ದು ನದಿಯ ತೀರದಿಂದ ೪೦೦೦ ಅಡಿಯಷ್ಟು ಎತ್ತರದಲ್ಲಿದೆ. ಮಾರ್ಗವು ಬಹು ದುರ್ಗಮ. ಮದರ್ ಸೇವಿಯರ್ ದಂಡಿಯಲ್ಲಿ ಪ್ರಯಾಣ ಮಾಡಿದರು. ಪರ್ವತದಲ್ಲಿ ಯಾವುದೇ ಮಂದಿರವಾಗಲಿ, ಪ್ರತಿಮೆಯಾಗಲಿ ಇಲ್ಲ. ಪರ್ವತ ಶೃಂಗವೇ ದೇವೀಸ್ಥಾನವೆಂದು ಪೂಜಿಸಲ್ಪಡುತ್ತದೆ. ಶಿಖರದಿಂದ ಒಂದು ಮೈಲಿ ಕೆಳಗೆ ಪಂಡಾಗಳ ವಾಸಗೃಹ. ಇಲ್ಲಿಂದ ಶೃಂಗಕ್ಕೆ ಹೋಗುವ ಮಾರ್ಗವು ಅತ್ಯಂತ ಅಪಾಯಕಾರಿಯಾದದ್ದು. ಅದರ ಅರ್ಧ ಭಾಗವನ್ನು ಕಲ್ಲನ್ನು ಗಟ್ಟಿಯಾಗಿ ಹಿಡಿದು ಹೇಗೋ ಹತ್ತಬೇಕಿತ್ತು. ಮದರ್ ಸೇವಿಯರನ್ನು ಆ ರೀತಿಯಾಗಿ ಪರ್ವತಶೃಂಗದವರೆಗೂ ಕರೆದೊಯ್ಯುವ ಧೈರ್ಯ ವಿರಜಾನಂದರಿಗೆ ಬರಲಿಲ್ಲ. ತಿಳಿಸಿ ಹೇಳಿ, ಅವರನ್ನು ಅಲ್ಲಿಯೇ ಇರಿಸಿ, ತಾವೊಬ್ಬರೇ ಶೃಂಗಕ್ಕೆ ಹೋಗಿ ದರ್ಶನ ಮಾಡಿ, ಇಳಿದು ಬಂದು, ದುರ್ಗಾಸಪ್ತಶತಿಯನ್ನು ಪಠಿಸಿದರು; ವಿಶೇಷ ಪೂಜೆಯ ವ್ಯವಸ್ಥೆಯನ್ನು ಮಾಡಿದರು.

*(ಮುಂದುವರಿಯುವುದು)*

---

೪ ಬ್ರ. ಸೀತಾರಾಮನ್ ಏಳು ತಿಂಗಳ ನಂತರ ಇದ್ದಕ್ಕಿದ್ದಂತೆ ಒಂದು ದಿನ ಶ್ಯಾಮಲಾತಾಲ್‌ಗೆ ಹಾಜರ್! ತಮ್ಮ ಹಿಂದಿನ ವರ್ತನೆಗಾಗಿ ಬಹಳಷ್ಟು ಪರಿತಪಿಸಿ, ವಿರಜಾನಂದರಲ್ಲಿ ಕ್ಷಮೆ ಯಾಚಿಸಿದರು. ವಿರಜಾನಂದರೂ ಸಹ ಅವರನ್ನು ಆದರದಿಂದ ಮತ್ತೆ ತಮ್ಮ ಬಳಿ ಇರಿಸಿಕೊಂಡರು.

೫ ಮಿಸ್ ಜೋಸೆಫಿನ್ ಮ್ಯಾಕ್ಲಿಯಾಡ್ ಅವರು ತಮ್ಮ ‘ವಿವೇಕಾನಂದ ಸ್ಮೃತಿ’ಯಲ್ಲಿ ಹೀಗೆ ಬರೆದಿದ್ದಾರೆ: ‘‘ಜುಲೈ ೪ ರಂದು (೧೯೦೨) ಬೇಲೂರು ಮಠದಿಂದ ‘ಕೇಬಲ್’ ಮೂಲಕ ನನಗೊಂದು ವಾರ್ತೆ ಬಂತು, ‘ಸ್ವಾಮೀಜಿಯವರು ನಿರ್ವಾಣವನ್ನು ಹೊಂದಿದರು’ ಎಂದು. ಕೆಲವು ದಿನ ಗರಬಡಿದವಳಂತೆ ಸ್ತಬ್ಧಳಾಗಿಬಿಟ್ಟೆ. ಆ ಕೇಬಲ್‌ಗೆ ಯಾವ ಉತ್ತರವನ್ನೂ ನೀಡಲಿಲ್ಲ. ನನ್ನ ಮನಸ್ಸು ವಿಷಣ್ಣತೆಯ ಗಾಢಾಂಧಕಾರದಲ್ಲಿ ಮುಳುಗಿಹೋಯಿತು; ಹಲವು ವರ್ಷಗಳನ್ನು ಅಳುತ್ತಲೇ ಕಳೆದೆ. ‘ನೀನು ಯಾರಿಂದಲಾದರೂ ನಿಜವಾಗಿಯೂ ಪ್ರಭಾವಿತನೇ ಆಗಿದ್ದರೆ, ಅದನ್ನು ನಿನ್ನ ಜೀವನದಿಂದ ಪ್ರಮಾಣೀಕರಿಸು, ಕಣ್ಣೀರಿನಿಂದಲ್ಲ’ ಎಂಬ ಮೆಟರ್ ಲಿಂಕ್‌ನ ಹೇಳಿಕೆಯನ್ನು ಮುಂದೊಂದು ದಿನ ಓದಿದ ಮೇಲೆ ನಾನು ಮತ್ತೆ ಕಣ್ಣೀರು ಸುರಿಸಲಿಲ್ಲ. ನಾನು ಅಮೇರಿಕೆಗೆ ಹಿಂತಿರುಗಿ, ಸ್ವಾಮೀಜಿಯವರು ಯಾವ ಯಾವ ಸ್ಥಳಗಳಿಗೆ ಹೋಗಿದ್ದರೋ ಆ ಸ್ಥಳಗಳನ್ನೆಲ್ಲ ಪತ್ತೆಹಚ್ಚಿ ಸಂದರ್ಶಿಸಲಾರಂಭಿಸಿದೆ... ೧೪ ವರ್ಷಗಳನಂತರ ನಾನು ಭಾರತಕ್ಕೆ ಮರಳಿದೆ. ಭಾರತವು ನಿರಾನಂದ-ನೈರಾಶ್ಯದ ದೇಶವಲ್ಲ , ಇಡೀ ಭರತಖಂಡವೇ ಸ್ವಾಮೀಜಿಯವರ ಚಿಂತನೆಗಳಿಂದ ಉದ್ದೀಪಿತ. ಒಮ್ಮೆ ಅವರನ್ನು, ‘ಸ್ವಾಮೀಜಿ ನಾನು ನಿಮಗೆ ಹೇಗೆ ಹೆಚ್ಚಿನ ಸಹಾಯ ಒದಗಿಸಬಲ್ಲೆ?’ ಎಂದು ಕೇಳಿದ್ದು ನೆನಪಿದೆ. ಅದಕ್ಕುತ್ತರವಾಗಿ ಅವರು, ‘ಭಾರತವನ್ನು ಪ್ರೀತಿಸು’ ಎಂದಿದ್ದರು. ಆದ್ದರಿಂದ ನಾನು ಭರತಖಂಡದಲ್ಲೇ ನೆಲೆಸಲಿಚ್ಛಿಸುವೆ.’’ (*Reminiscences of Swami Vivekananda*, Prabuddha Bharata, December 1949)

‘‘ಯಾವುದು ಚಿತ್ತ ಮತ್ತು ಹೃದಯವನ್ನು ಶುದ್ಧಿ ಮಾಡುವುದೋ ಅದೇ ನಿಜವಾದ ಜ್ಞಾನ. ಉಳಿದುದೆಲ್ಲ ಅಜ್ಞಾನ.’’

‘‘ಭಕ್ತ ತನ್ನ ಇಷ್ಟದೇವತೆಯನ್ನು ತಾಯಿಯೆಂದು ಕರೆಯುವುದರಿಂದ ಏತಕ್ಕೆ ಅಷ್ಟೊಂದು ಭಾವೋನ್ಮಾದವನ್ನು ಪಡೆಯುವನು? ಏಕೆಂದರೆ, ಮಗುವಿಗೆ ಎಲ್ಲರಿಗಿಂತ ಹೆಚ್ಚಾಗಿ ತಾಯಿಯಲ್ಲಿ ಸಲಿಗೆ. ಆದ ಕಾರಣವೇ ಅವಳು ಎಲ್ಲರಿಗಿಂತಲೂ ಸಮೀಪದವಳು.’’

*— ಶ್ರೀರಾಮಕೃಷ್ಣರು*